(ಇಂದು ದಿನಾಂಕಃ 20-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆಃ ಶ್ರೀ. RSK ಎದುರುದಾರರ ಪರವಕೀಲರಿಂದ**

1. ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಂತಹ ವಿಷಯಗಳು ಸರಿಯಾಗಿವೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ.

- ಅಧಿಕಾರ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿ.ಆರ್-1 ಎಂದು, ಗುರುತಿಸಲಾಯಿತು.
- ವಿಮೆ ಪಾಲಿಸಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಆರ್-2 ಎಂದು, ಗುರುತಿಸಲಾಯಿತು.
- ಪ್ರಾದೇಶಿಕ ಉಪ ಸಾರಿಗೆ ಆಯುಕ್ತರು ನೀಡಿದ ವರದಿಯನ್ನು ನಿ.ಆರ್-3 ಎಂದು, ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ VSK ಅರ್ಜಿದಾರ ಪರ ವಕೀಲರಿಂದಃ**

ಅಪಘಾತವಾದಾಗ ಪಾಲಿಸಿ ಚಾಲನೆಯಲ್ಲಿ ಇತ್ತು ಎಂದರೆ ಸರಿ. ನನ್ನ ಪ್ರತಿವಾದ ಪತ್ರದಲ್ಲಿ ಅಪಘಾತಕ್ಕೆ ಒಳಗಾದ ವಾಹನದ ಪರ್ಮಿಟ ಬಗ್ಗೆ ಆಪಾದನೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನಾವು ವಿಮಾ ಪಾಲಿಸಿ ನೀಡುವಾಗ ವಾಹನದ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿ ನೀಡುತ್ತೇವೆ ಎಂದರೆ ಸರಿಯಲ್ಲ. ಕೇವಲ ವಾಹನದ ನೋಂದಣೆ ದಾಖಲಾತಿಯನ್ನು ಮಾತ್ರ ನೋಡಿ ವಿಮಾ ಪಾಲಿಸಿ ನೀಡುತ್ತೇವೆ. ಮೃತ ವ್ಯಕ್ತಿಯು ನಮ್ಮ ಕಂಪನಿಯ ವಿಮಾ ಪಾಲಿಸಿಗೆ ಒಳಪಟ್ಟ ವಾಹನದಿಂದ ಅಪಘಾತವಾಗಿದ್ದರಿಂದ ಆತನ ಮೇಲೆ ಯಾವುದೇ ಬಾದ್ಯತೆ ಅಥವಾ ವಾಹನದ ಪರ್ಮಿಟ ಉಲ್ಲಂಘನೆ ನಮಗೆ ಸಂಬಂಧಿಸುವುದಿಲ್ಲ ಎಂದರೆ ಸರಿಯಲ್ಲ. ಕೆ.ಎ-32 ಎ.ಎ-3928 ವಾಹನದಿಂದ ಅಪಘಾತ ವಾಗಿರುತ್ತದೆ ಎಂದು ತನಿಖಾಧಿಕಾರಿಗಳು ಸರಿಯಾಗಿ ತನಿಖೆ ಮಾಡಿ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ನಮ್ಮ ಕಂಪನಿಗೆ ಒಳಪಟ್ಟ ಇನ್ಸೂರೆನ್ಸ ವಾಹನದಿಂದ ಅಪಘಾತವಾಗಿದ್ದರೂ ಪರಿಹಾರವನ್ನು ಕೊಡಬಾರದು ಅನ್ನುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುವ ವಿಷಯಗಳು ಸುಳ್ಳು ಇರುತ್ತವೆ ಎಂದರೆ ಸರಿ ಅಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.